ಸಾಕ್ಷಿ ಯನ್ನು ದಿಃ 02.03.2026 ರಂದು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**<u>ಪಾಟೀ ಸವಾಲುಃ ಪಿರ್ಯಾದುದಾರರ ಪರ ವಕೀಲರಿಂದ</u>**

1. ನಾನು 10 ನೇ ತರಗತಿವರೆಗೆ ಓದಿದ್ದೇನೆ.
2. ಬೈಲಕುಪ್ಪೆಯ ಎಸ್.ಬಿ.ಐ ನಲ್ಲಿ ನಿಮಗೆ ಖಾತೆ ಇದೆ ಎಂದರೆ ಸರಿ.
3. ನಿಪಿ - 1 ರ ಚೆಕ್ಕು ನಿಮ್ಮ ಖಾತೆಗೆ ಸಂಬಂಧಪಟ್ಟಿದ್ದು ಎಂದರೆ ಸರಿ. ಅದರಲ್ಲಿರುವ ನಿಪಿ - 1(ಎ)ರ ಸಹಿ ನನ್ನದಲ್ಲ.
4. ಸಾಕ್ಷಿಗೆ ಅವರ ಆರೋಪಣೆ ಹಾಗೂ ವಕಾಲತ್ ನಲ್ಲಿರುವ ಸಹಿ ತೋರಿಸಿದ್ದು, ಅದರಲ್ಲಿರುವ ಸಹಿ ತನ್ನದು ಎಂದು ನುಡಿಯುತ್ತಾರೆ.
5. ನಿಪಿ - 5 ರ ಅಂಚೆ ಸ್ವೀಕೃತಿಯಲ್ಲಿರುವ ಸಹಿ ನನ್ನದು.

6. ದೂರುದಾರರು ನಮ್ಮ ಊರಿನವರಲ್ಲ. ನಾನು ಕುಂದನಹಳ್ಳಿ ಹಾಗೂ ಅವರು ಸುಳಗೋಡು ಗ್ರಾಮದವರು.

7. ಕುಂದನಹಳ್ಳಿ ಹಾಗೂ ಸುಳಗೋಡು ಗ್ರಾಮಕ್ಕೆ 5-6 ಕಿ.ಮೀ ಅಂತರ ಇದೆ. ದೂರುದಾರರು ನಮಗೆ ಸಂಬಂಧಿಕರಾಗಬೇಕು. ಅವರನ್ನು ಭೂತನಹಳ್ಳಿ ಗ್ರಾಮದಿಂದ ಸುಳಗೋಡು ಗ್ರಾಮಕ್ಕೆ ಮದುವೆ ಮಾಡಿಕೊಡಲಾಗಿದೆ ಎಂದರೆ ಸರಿ. ಅವರ ಮದುವೆ ಆಗಿ ಎಷ್ಟು ವರ್ಷವಾಯಿತು ಎಂದು ನನಗೆ ಗೊತ್ತಿಲ್ಲ.

8. ದೂರುದಾರರನ್ನು ಈ ಪ್ರಕರಣ ಹಾಕುವ ಮುಂಚೆ ಅವರ ಮನೆಯ ಬಳಿ 2 ವರ್ಷದ ಹಿಂದೆ ಭೇಟಿ ಮಾಡಿದ್ದೆ. ಅವರ ಮನೆಗೆ ನನ್ನ ಮಗಳನ್ನು ಬಿಟ್ಟು ಬರಲು ಹೋಗಿದ್ದೆ. ದಿನಾಂಕ ನನಗೆ ಗೊತ್ತಿಲ್ಲ.

9. ದೂರುದಾರರಿಗೆ ಈಗ ಒಬ್ಬ ಮಗ ಇದ್ದಾರೆ. ಒಬ್ಬ ಮಗಳು ಮೃತರಾಗಿದ್ದಾರೆ. ಅವರ ಮಗಳು ಯಾವಾಗ ಮೃತರಾದರು ಎಂದು ನನಗೆ ಗೊತ್ತಿಲ್ಲ.

10. ಅವರ ಮಗನ ಬಳಿ ಜೆಸಿಬಿ, ಟ್ರಾಕ್ಟರ್ ಇವೆ ಎಂದರೆ ಸರಿ.

11. ದೂರುದಾರರ ಪತಿಯ ಹೆಸರಿನಲ್ಲಿ ಎಷ್ಟು ಜಮೀನು ಇದೆ ಎಂದು ನನಗೆ ಗೊತ್ತಿಲ್ಲ. 3 ರಿಂದ 3 ವರೆ ಎಕರೆ ಇರಬಹುದು. ಅದರಲ್ಲಿ ಅವರು ಏನೇನು ಬೆಳೆ ಬೆಳೆಯುತ್ತಾರೆ ಎಂದರೆ, ಶುಂಠಿ, ಜೋಳ ಬೆಳೆಯುತ್ತಾರೆ.

12. ದೂರುದಾರರಿಗೆ ನಾನು ಕಾರ್ತಿಕ್ ವಕೀಲರ ಮೂಲಕ ಪ್ರತ್ಯುತ್ತರ ನೋಟೀಸು ನೀಡಿದ್ದೆ. ಸದರಿ ಪ್ರತ್ಯುತ್ತರದಲ್ಲಿ ಬರೆದ ವಿಚಾರಗಳನ್ನು ನಾನು ತಿಳಿದುಕೊಂಡಿಲ್ಲ.

13. ಪ್ರತ್ಯುತ್ತರ ಬರೆಯಲು ಏನು ಮಾಹಿತಿ ನೀಡಿದ್ದೀರಿ ಎಂದರೆ, 10 ಸಾವಿರ ಹಣ ಪಡೆದು ಬಡ್ಡಿ ಸಮೇತ ವಾಪಸ್ ನೀಡಿದ್ದರೂ ಸುಳ್ಳು ಕೇಸ್ ಹಾಕುತ್ತಾರೆ ಎಂದು ಹೇಳಿದ್ದೆ. ಅವರು ನನ್ನ ಚೆಕ್ ತೆಗೆದುಕೊಂಡು ಹೋಗಿರುವುದು ನನಗೆ ಗೊತ್ತಿರಲಿಲ್ಲ.

14. ದೂರುದಾರರಿಂದ ಯಾವ ದಿನಾಂಕಂದು 10 ಸಾವಿರ ಪಡೆದಿದ್ದೆ ಎಂದು ನನಗೆ ಗೊತ್ತಿಲ್ಲ. ಈ ಪ್ರಕರಣ ಹಾಕುವ 6 ತಿಂಗಳ ಮುಂಚೆ ಪಡೆದಿದ್ದೆ.

15. ದೂರುದಾರರು ನೋಟೀಸು ಕೊಡುವ ಮುಂಚೆ ಹಣ ನೀಡಿದ್ದೆ. ಸದರಿ 10 ಸಾವಿರಕ್ಕೆ ಈ ಚೆಕ್ ನೀಡಿದ್ದೀರಾ ಎಂದರೆ, ನಾನು ಯಾವುದೇ ಚೆಕ್ ನೀಡಿಲ್ಲ.

16. ದೂರುದಾರರು ನಿಮ್ಮ ಮನೆಯಿಂದ ಚೆಕ್ ಕಳವು ಮಾಡಿದ್ದಾರೆ ಎಂದು ಮಾಹಿತಿ ನೀಡಿದ್ದೀರಾ ಎಂದರೆ, ಇಲ್ಲ.

17. ಚೆಕ್ಕನ್ನು ನಾನು ಬರೆದಿರಲಿಲ್ಲ, ಸಹಿ ಸಹ ಹಾಕಿರಲಿಲ್ಲ. ಖಾಲಿ ಚೆಕ್ಕನ್ನು ಟೇಬಲ್ ಮೇಲೆ ಇಟ್ಟಿದ್ದನ್ನು ತೆಗೆದುಕೊಂಡು ಹೋಗಿರಬಹುದು. ಯಾವ ದಿನಾಂಕ ತೆಗೆದುಕೊಂಡು ಹೋದರು ಎಂದು ನನಗೆ ಗೊತ್ತಿಲ್ಲ.
18. ದೂರುದಾರರು ನೋಟೀಸು ನೀಡಿದ ನಂತರ ಪುನಃ ಕದಂಬ ಹೊಟೇಲ್ ಬಳಿ ಭೇಟಿ ಮಾಡಿದ್ದೆ. ಅವರು ಪುನಃ 20 ಸಾವಿರ ಕೇಳಿದ್ದರು. ಆಯಿತು ನಾನು ಕೊಡತ್ತೇನೆ ಎಂದು ಹೇಳಿದರೂ ಸಹ ಈ ಪ್ರಕರಣ ದಾಖಲು ಮಾಡಿದ್ದಾರೆ. ಆ ಸಮಯದಲ್ಲಿ ಶಿವರಾಜು, ಜಯಸ್ವಾಮಿ ರವರು ಇದ್ದರು.
19. ಚೆಕ್ಕನ್ನು ಬ್ಯಾಂಕಿಗೆ ತೆಗೆದುಕೊಂಡು ಹೋಗಲು ಟೇಬಲ್ ಮೇಲೆ ಇಟ್ಟಿದ್ದೆ. ಚೆಕ್ ಕಾಣೆಯಾದ ಬಗ್ಗೆ ದೂರು ನೀಡಿದ್ದೀರಾ ಎಂದರೆ, ಅವರು ತೆಗೆದುಕೊಂಡು ಹೋಗಿರುವುದು ಗೊತ್ತಿರಲಿಲ್ಲ. ಚೆಕ್ ಕಾಣೆಯಾದ ಬಗ್ಗೆ ಬ್ಯಾಂಕಿಗೆ ಅಥವಾ ಪೊಲೀಸರಿಗೆ ದೂರು ನೀಡಿದ್ದೀರಾ ಎಂದರೆ, ಇಲ್ಲ.
20. ಚೆಕ್ ಕಾಣೆಯಾದ ಬಗ್ಗೆ ಪ್ರತ್ಯುತ್ತರ ನೋಟೀಸಿನಲ್ಲಿ ಬರೆಸಿಲ್ಲ.

**(ಈ ಹಂತದಲ್ಲಿ ಮುಂದುವರಿದ ಪಾಟೀ ಸವಾಲಿಗೆ ಕಾಲಾವಕಾಶವನ್ನು ಕೋರಿದ್ದು, ಸಮಯನ್ನು ನೀಡಿ ಮುಂದುಡಲಾಯಿತು )**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದಂತೆ ನನ್ನ ಉಕ್ತಲೇಖದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಪಿರಿಯಾಪಟ್ಟಣ